ಕರ್ನಾಟಕ ಸರ್ಕಾರ (ಸಿ.ಆರ್.ಪಿ.67)

ಹೇಳಿಕೆ ಹಾಳೆ
**(**ಆರ್**.**ಪಿ**.**ಸಂಖ್ಯೆ **57)**
ನಮೂನೆ
ಸಂಖ್ಯೆ **4**
**(**ಸಿವಿಲ್**)**

ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ**.**ಎಂ**.**ಎಫ್**.**ಸಿ ನ್ಯಾಯಾಲಯ**,** ಹೊಸಕೋಟೆ
ಇವರ ನ್ಯಾಯಾಲಯದಲ್ಲಿ

<u>ಸಿ.ಸಿ.ನಂಬರ್ **2698-2020**</u>

ಪಿ.ಡಬ್ಲು-2.
ಸಿ.ಡಬ್ಲು-1.

ಹೆಸರು : ಮಹೇಶ್
ತಂದೆಯ ಹೆಸರು : ಲೇ. ಹುಚ್ಚಪ್ಪ
ವಯಸ್ಸು : 45
ಉದ್ಯೋಗ : ಖಾಸಗಿ
ವಾಸ ಸ್ಥಳ : ಚೊಕ್ಕಹಳ್ಳಿ

ದಿ: 08.07.2026 ರಂದು ಸತ್ಯ ಪ್ರತಿಜ್ಞೆ ಮೇಲೆ ಪ್ರಮಾಣ ವಚನ ಬೋಧಿಸಲಾಯಿತು.

<u>ಮುಖ್ಯ ವಿಚಾರಣೆ**:** ಸಹಾಯಕ ಸರ್ಕಾರಿ ಅಭಿಯೋಜಕರಿಂದ</u>

ಚಾ.ಸಾ.2 ರಿಂದ 7 ರವರ ಪರಿಚಯವಿಲ್ಲ. ಆರೋಪಿಯ ಪರಿಚಯವಿಲ್ಲ. ಮೃತ ಜೀತೇಂದ್ರ ಕುಮಾರ್ ರವರ ಪರಿಚಯವಿಲ್ಲ.

ಈಗ ನನಗೆ ತೋರಿಸಿದ ದಾಖಲೆಯಲ್ಲಿರುವ ಸಹಿ ನನ್ನದು. ಸದರಿ ದಾಖಲೆಗೆ ಬಹಳ ವರ್ಷಗಳ ಹಿಂದೆ ಚೊಕ್ಕಹಳ್ಳಿಯ ಫ್ಯಾಕ್ಟರಿ ಗೇಟ್ ಬಳಿ ಸಹಿ ಮಾಡಿರುತ್ತೇನೆ. ಸದರಿ ದಾಖಲೆಯು ಯಾವುದರು ಕುರಿತು ಮತ್ತು ಅದರಲ್ಲಿ ಬರೆದಿರವ ವಿಷಯಗಳು ನನಗೆ ಗೊತ್ತಿಲ್ಲ. ನಾನು ಅಪಘಾತ ಕುರಿತು ಯಾವುದೇ ಪಿರ್ಯಾದನ್ನು ನೀಡಿರುವುದಿಲ್ಲ ಮತ್ತು ನಾನು ಯಾವುದೇ ಅಪಘಾತವನ್ನು ನೋಡಿರುವುದಿಲ್ಲ. ಸದರಿ ದಾಖಲೆಯ ಪಿರ್ಯಾದು ಆಗಿದ್ದು ನಿಪಿ.2 ಎಂದು, ಸಾಕ್ಷಿಯ ಸಹಿಯನ್ನು ನಿಪಿ.2(ಎ) ಎಂದು ಗುರುತಿಸಲಾಯಿತು.

ಈಗ ನನಗೆ ತೋರಿಸಿದ ದಾಖಲೆಯಲ್ಲಿರುವ ಸಹಿ ನನ್ನದು. ಸದರಿ ದಾಖಲೆಗೆ ಬಹಳ ವರ್ಷಗಳ ಹಿಂದೆ ಚೊಕ್ಕಹಳ್ಳಿಯ ಫ್ಯಾಕ್ಟರಿ ಗೇಟ್ ಬಳಿ ಸಹಿ ಮಾಡಿರುತ್ತೇನೆ. ಸದರಿ ದಾಖಲೆಯು ಯಾವುದರು ಕುರಿತು ಮತ್ತು ಅದರಲ್ಲಿ ಬರೆದಿರವ ವಿಷಯಗಳು ನನಗೆ ಗೊತ್ತಿಲ್ಲ. ನಾನು ಯಾವುದೇ ಆಸ್ಪತ್ರೆಗೆ ಭೇಟಿ ನೀಡಿರುವುದಿಲ್ಲ ಮತ್ತು ನನ್ನ ಸಮಕ್ಷಮ ಯಾವುದೇ ಶವ ಮಹಜರನ್ನು ಜರುಗಿಸಿರುವುದಿಲ್ಲ. ಸದರಿ ದಾಖಲೆಯ ಶವ ಮಹಜರು ಆಗಿದ್ದು ನಿಪಿ.3 ಎಂದು, ಸಾಕ್ಷಿಯ ಸಹಿಯನ್ನು ನಿಪಿ.3(ಎ) ಎಂದು ಗುರುತಿಸಲಾಯಿತು. ಈ ನನಗೆ ತೋರಿಸಿದ ಛಾಯಾಚಿತ್ರದಲ್ಲಿ ಕಾಣುತ್ತಿರುವ ವ್ಯಕ್ತಿಯನ್ನು ಈ ಹಿಂದೆ ನೋಡಿರುವುದಿಲ್ಲ.

**(**ಈ ಹಂತದಲ್ಲಿ ಸಸಅ ರವರ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೇಳಿದ್ದರಿಂದ ಅನುಮತಿ ನೀಡಲಾಯಿತು**.)**

<u>ಪಾಟೀ ಸವಾಲು</u>**:** ಸಹಾಯಕ ಸರ್ಕಾರಿ ಅಭಿಯೋಜಕರಿಂದ **.**

ದಿ:28.03.2020 ರಂದು ಬೆಳಿಗ್ಗೆ 10.15 ಗಂಟೆ ಸಮಯದಲ್ಲಿ ನಾನು ತರಕಾರಿ ತರುವ ಸಲುವಾಗಿ ಚೊಕ್ಕಹಳ್ಳಿ ಗೇಟ್ ಬಳಿ ಇರುವ ಸಂತೆಗೆ ಹೋಗಿದ್ದಾಗ ಬೆಳಿಗ್ಗೆ ಸುಮಾರು 10.45 ಗಂಟೆ ಸಮಯದಲ್ಲಿ ಓರ್ವ ವ್ಯಕ್ತಿ ಚೊಕ್ಕಹಳ್ಳಿ ಸಂತೆ ಎದುರುಗಿನ ರಸ್ತೆಯನ್ನು ದಾಟುತ್ತಿದ್ದಾಗ ಈ ದಿನ ನ್ಯಾಯಾಲಯದ ಮುಂದಿರುವ ಆರೋಪಿಯು ತನ್ನ ಬಾಬ್ತು ಕ್ಯಾಂಟರ್ ವಾಹನ ನೊಂದಣಿ ಸಂಖ್ಯೆ ಕೆಎ-05-ಎಇ-6601 ನ್ನು ಅತೀವೇಗ ಮತ್ತು ಅಜಾಗರುಕತೆಯಿಂದ ಚಲಾಯಸಿಕೊಂಡು ಬಂದು ಸದರಿ ವ್ಯಕ್ತಿಗೆ ಡಿಕ್ಕಿ ಪಡಿಸಿ ಅಪಘಾತ ಪಡಿಸಿದ್ದ ಎಂದರೆ ಸರಿಯಲ್ಲ. ತದನಂತರ ನಾನು ಹತ್ತಿರ ಹೋಗಿ ನೋಡಲಾಗಿ ಅಪಘಾತಕ್ಕೆ ಒಳಗಾಗಿದ್ದ ವ್ಯಕ್ತಿಯ ಮೈಕೈಗೆ ಗಾಯವಾಗಿ ಸ್ಥಳದಲ್ಲಿಯೇ ಮೃತಪಟ್ಟಿದ್ದ ಎಂದರೆ ಸರಿಯಲ್ಲ. ತದನಂತರ ನಾನು ಮತ್ತು ಸದರಿ ರಸ್ತೆಯಲ್ಲಿ ಸೇರಿದ ಇತರ ಜನರು ಮೃತ ಪಟ್ಟ ವ್ಯಕ್ತಿಯ ಜೇಬಿನಲ್ಲಿದ್ದ ಆಧಾರ್ ಕಾರ್ಡ್ ನ್ನು ತೆಗೆದು ನೋಡಲಾಗಿ ಸದರಿ ವ್ಯಕ್ತಿ ಹೆಸರು ಜಿತೇಂದ್ರ ಕುಮಾರ್ ಯಾದವ್ ಎಂದು ತಿಳಿದುಬಂದಿತ್ತು ಎಂದರೆ ಸರಿಯಲ್ಲ. ತದನಂತರ ಸದರಿ ಮೃತ ದೇಹವನ್ನು ತುರ್ತು ವಾಹಾನದಲ್ಲಿ ಹೊಸಕೋಟೆಗೆ ತೆಗೆದುಕೊಂಡು ಹೋಗಲಾಗಿತ್ತು ಎಂದರೆ ಸರಿಯಲ್ಲ. ಅದೇ ದಿನ ಮಧ್ಯಾಹ್ನ 2.30 ಗಂಟೆಗೆ ಸೂಲಿಬೆಲೆ ಪೋಲಿಸ್ ಠಾಣೆಗೆ ಹೋಗಿ ನಿಪಿ.2 ರಂತೆ ದೂರನ್ನು ದಾಖಲಿಸಿದೆ ಎಂದರೆ ಸರಿಯಲ್ಲ.

ದಿಃ30.03.2020 ರಂದು ಬೆಳಿಗ್ಗೆ 7.30 ಗಂಟೆಗೆ ಹೊಸಕೋಟೆಯ ಎಂ.ವಿ.ಜೆ ಆಸ್ಪತ್ರೆಯ ಶವಗಾರಕ್ಕೆ ಭೇಟಿ ನೀಡಿದ್ದು ಅಲ್ಲಿ ನನ್ನ ಮತ್ತು ಚಾ.ಸಾ.6 ಮತ್ತು 7 ರವರ ಸಮಕ್ಷಮ ಬೆಳಿಗ್ಗೆ 7.30 ರಿಂದ 10.00 ಗಂಟೆಯವರೆಗೆ ನಿಪಿ.3 ರಂತೆ ಮಹಜರನ್ನು ಜರುಗಿಸಲಾಗಿತ್ತು ಎಂದರೆ ಸರಿಯಲ್ಲ. ನಾನು ಆರೋಪಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲು**:** ಆರೋಪಿ ಪರ ಶ್ರೀಮತಿ ಜೆ**.** ಎಂ**.**ಪಿ**.,**ವಕೀಲರಿಂದ**:** ಏನು ಇಲ್ಲ

<u>**ಮರುವಿಚಾರಣೆ:-ಇಲ್ಲ-**</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದ ಮೇಲೆ ಗಣಕೀಕರಿಸಿದೆ)

ಓ.ಹೇ.ಕೇ.ಸ.ಇದೆ.

ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.
ಹೊಸಕೋಟೆ.